# ಅಸ್ಪೃಶ್ಯತೆ ಮತ್ತು ಸಮಾಜದ ಹೊಣೆಗಾರಿಕೆ

# Asprushyate Mattu Samajada Honegaarike

**Dr. K Anjanappa**

Associate Professor,
Dept of Kannada,
Tunga Mahavidyalaya,
Thirthahalli, Shivamogga Dist.,
Karnataka State.

ನಮ್ಮ ಸಮಾಜ ವ್ಯವಸ್ಥೆಯಲ್ಲಿ ಏಳು ಜನರಲ್ಲಿ ಒಬ್ಬನನ್ನು ಅಸ್ಪೃಶ್ಯನೆಂದು ಪರಿಗಣಿಸುವ ಪರಿಪಾಠವಿದೆ. ಅಸ್ಪೃಶ್ಯ ಎನ್ನಿಸಿಕೊಂಡವನನ್ನು ಸಾಮಾಜಿಕ ಬದುಕಿನಿಂದ ದೂರವಿಡುವುದೇ ಈ ಆಚರಣೆಯ ಗುರಿ, ಇದು ಆರೋಗ್ಯದ ಕಾರಣದಿಂದ ಹುಟ್ಟಿದ್ದಲ್ಲ. ಸಾಮಾಜಿಕ ಕಾರಣದಿಂದ ಹುಟ್ಟಿದ್ದು. ಸಾವಿರಾರು ವರ್ಷಗಳ ಇತಿಹಾಸವಿರುವ ಅಸ್ಪೃಶ್ಯತೆ ವರ್ಣ ವ್ಯವಸ್ಥೆಯ ಹುಟ್ಟಿನ ನಂತರ ಜಾರಿಗೆ ಬಂದಿತೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಎಲ್ಲ ಜಾತಿಗಳಲ್ಲಿ ಕೆಲವರು ಆ ಜಾತಿಯ ಕಟ್ಟುಪಾಡುಗಳನ್ನು ಮುರಿದರು. ಆದ್ದರಿಂದ ಅವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಯಿತೆಂಬ ಅಭಿಪ್ರಾಯವಿದೆ. ಜನಾಂಗ ಘರ್ಷಣೆಯಲ್ಲಿ ಸೆರೆಸಿಕ್ಕವರು, ಗೋಮಾಂಸ ಭಕ್ಷಣೆಯನ್ನು ಮುಂದುವರಿಸಿದವರು ಅಸ್ಪೃಶ್ಯರಾದರು ಎಂಬ ಅಭಿಪ್ರಾಯವೂ ಇದೆ. ಹೀಗೆ ಅನೇಕ ಕಾರಣಗಳಿಂದ ಆರಂಭವಾದ ಈ ಪದ್ದತಿ ಆಧುನಿಕ ಸಮಾಜದಲ್ಲಿ ಮುಂದುವರಿಯುತ್ತಿರುವುದು ನಮ್ಮ ನಾಗರೀಕ ಪ್ರಜ್ಞೆಗೆ ಎಸೆದ ಸವಾಲು. ಸಂಪೂರ್ಣ ಅರ್ಥಹೀನವಾಗಿರುವ ಅಸ್ಪೃಶ್ಯತೆ ಈಗ ಒಂದು ಪದ್ಧತಿಯಲ್ಲ, ಪಿಡುಗು. ಹುಟ್ಟಿನ ಕಾರಣದಿಂದ ಮನುಷ್ಯನ ವ್ಯಕ್ತಿತ್ವವನ್ನು ನಿರ್ಧರಿಸುವ ಈ ಪದ್ಧತಿ ಮಾನವತಾವಾದಿಗಳಿಂದ ಖಂಡಿಸ ಲ್ಪಟ್ಟಿದೆ. ಮಾನವ ಜನಾಂಗದಲ್ಲಿ ತರತಮ ಭಾವವನ್ನುಂಟು ಮಾಡುವ ಅಸ್ಪೃಶ್ಯತೆ ಪ್ರವೃತ್ತಿಯೇ ಅಸ್ಪೃಶ್ಯತೆಯ ಮೂಲ. ಈ ಅಸಮಾನತೆಯ ಪ್ರವೃತ್ತಿ ಯನ್ನು ತೀವ್ರವಾಗಿ ವಿರೋಧಿಸಿದವರಲ್ಲಿ ಬುದ್ಧನು ಮೊದಲಿಗ ಜಾತಿ, ವರ್ಣವನ್ನು ಪರಿಗಣಿಸದೆ ಎಲ್ಲರಿಗೂ ತನ್ನ ಧರ್ಮದಲ್ಲಿ ಪ್ರವೇಶವನ್ನು ಕೊಟ್ಟನು. ಇದು ನಮ್ಮ ಶ್ರೇಣೀಕರಣಗೊಂಡ ಸಮಾಜ ವ್ಯವಸ್ಥೆಯ ಮೇಲೆ ನಡೆದ ಮೊದಲ ದಾಳಿ, ಕಸಗುಡಿಸುತ್ತಿದ್ದ ವ್ಯಕ್ತಿಯೊಬ್ಬನನ್ನು ಉಳಿದವರೆಲ್ಲ ಕೀಳಾಗಿ ಕಂಡಾಗ ಬುದ್ಧನು ಆ ವ್ಯಕ್ತಿಯನ್ನು ಗೌರವಿಸಿದ ಸಂಗತಿ ಜನಜನಿತವಾಗಿದೆ. ಅವನ ಶಿಷ್ಯ ಆನಂದನು ಅಮಾಪಾಲಿ ಎಂಬ ಚಾಂಡಾಲ ಮಹಿಳೆಯಿಂದ ನೀರನ್ನು ಸ್ವೀಕರಿಸಿ ಕುಡಿದ ಘಟನೆಯೂ ಅಷ್ಟೇ ಪ್ರಸಿದ್ಧ ವಾಗಿದೆ. ಈ ಬಗೆಯ ಉದಾರವಾದಿ ಧೋರಣೆಯನ್ನು ಆಗಿನ ಕಾಲಕ್ಕೆ ದೊಡ್ಡ ಪ್ರಮಾಣದ ಸುಧಾರಣೆ ಎಂದೇ ಭಾವಿಸಬಹುದು.

ವೃತ್ತಿಗನುಗುಣವಾಗಿ ಜಾತಿಪದ್ಧತಿ ನಿರ್ಮಾಣವಾಯಿತು. ಈ ಜಾತಿ ಪದ್ಧತಿಯಲ್ಲಿ ಅತ್ಯಂತ ಕಠಿಣವಾದ ಮತ್ತು ಕೀಳೆನಿಸಿಕೊಂಡ ವೃತ್ತಿಗಳನ್ನು ಮಾಡುತ್ತಿದ್ದವರು ಅಸ್ಪೃಶ್ಯತೆರಾದರು ಎಂಬ ಅಭಿಪ್ರಾಯವನ್ನು ಬಹಳ ಜನ ಒಪ್ಪುತ್ತಾರೆ. ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗೆ ನಾದ ; ವೇದವನೋದಿ ಹಾರುವನಾದ ಎಂದು ಹೇಳುವಲ್ಲಿ ಬಸವಣ್ಣನವರು ಜಾತಿಪದ್ಧತಿಯ ವೃತ್ತಿ ಮೂಲ ಗುಣವನ್ನು ಖಚಿತವಾಗಿ ಗುರುತಿಸಿದ್ದಾರೆ. ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಬಸವಣ್ಣನವರು ಮಾಡಿದ ಪ್ರಯತ್ನ ಅತ್ಯಂತ ಉನ್ನತವಾದುದು. ಇಂದಿಗೂ ಅನುಕರಣೀಯವಾದುದು. ಕೆಳವರ್ಗದವರಿಗೆ ಸ್ವಾಭಿಮಾನವನ್ನೂ ಘನತೆಯನ್ನೂ ಕಲಿಸಿಕೊಟ್ಟವರು ಬಸವಣ್ಣನವರೆಂದೇ ಹೇಳಬಹುದು. ಇತಿಹಾಸದಲ್ಲಿ ಮೊಟ್ಟ ಮೊದಲ ಬಾರಿಗೆ ಅಂತರಜಾತಿ ವಿವಾಹವೊಂದನ್ನು ಬೆಂಬಲಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಉತ್ತಮ ಕುಲದಲ್ಲಿ ಹುಟ್ಟಿದನೆಂಬ 'ಕಷ್ಟತನದ ಹೊರೆಯ ಹೊರಿಸದಿರಯ್ಯಾ' ಎಂಬ ಅವರ ಮಾತು ಅತ್ಯಂತ ಪ್ರಾಮಾಣಿಕವಾದುದು, ಹೀಗೆ ಉತ್ತಮ ಕುಲದ ಅಭಿಮಾನವನ್ನೂ, ಕೀಳುಕುಲದ ಕೀಳರಿಮೆಯನ್ನು ಏಕ ಕಾಲದಲ್ಲಿ ಅಳಿಸಿಹಾಕಲು ಬಸವಣ್ಣನವರು ಪ್ರಯತ್ನಿಸಿದರು. ಬಸವಣ್ಣನವ ರಂಥ ಮಹಾವ್ಯಕ್ತಿಗಳ ಪ್ರಯತ್ನದಿಂದಲೂ ಈ ಪಿಡುಗು ಕಡಿಮೆ ಆಗಲಿಲ್ಲ. ಮುಂದೆ ಪುರಂದರ ದಾಸರು ತಮ್ಮ ಕೀರ್ತನೆಯಲ್ಲಿ "ಹೊಲೆಯಹೊರಗಿಹನೆ ಊರೊಳಗಿಲ್ಲವೆ?" ಎಂದು ಪ್ರತಿಕ್ರಿಯಿಸಿದರು.

"ಕುಲಕುಲ ವೆನ್ನುತಿಹರು ಕುಲ ಯಾವುದು ಸತ್ಯ ಸುಖವುಳ್ಳ ಜನರಿಗೆ" ಎಂದು ಕನಕ ದಾಸರು ತಮ್ಮ ನೋವನ್ನು ತೋಡಿಕೊಂಡರು.

ಭಕ್ತಿಪಂಥದವರು ದೇವರ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂಬ ನಿಲುವನ್ನು ಪ್ರತಿಪಾದಿಸಿದರು. ಇಲ್ಲಿಗೆ ನೂರಾರು ವರ್ಷಗಳ ಹಿಂದೆಯ ದಲಿತರಿಗೆ ದೇವಾಲಯ ಪ್ರವೇಶವನ್ನು ದೊರಕಿಸಿಕೊಡಲು ಪ್ರಯತ್ನಿಸಿದ ರಾಮಾನುಜಾಚಾರ್ಯರ ಮಾನವೀಯ ಧೋರಣೆ ಮೆಚ್ಚುವಂತದ್ದು. ಬಸವ ರಾಮಾನುಜರು ದಲಿತ ವರ್ಗದ ಬಗ್ಗೆ ಇಟ್ಟುಕೊಂಡಿದ್ದ ಕಾಳಜಿ ಅವರ ಮುಂದಿನ ಪರಂಪರೆಯಲ್ಲಿ ನಶಿಸುತ್ತಾ ಬಂದದ್ದು ತುಂಬ ನೋವಿನ ಸಂಗತಿ. ಆದ್ದರಿಂದಲೇ ಸಮಸ್ಯೆಗಳು ಇಂದಿಗೂ ಉಳಿದುಕೊಂಡು ಬರುವಂತಾಯಿತು. ಅಸ್ಪೃಶ್ಯತೆಯ ಅಸಮಾನತೆ ಹಾಗೆಯೇ ಮುಂದುವರಿಯಿತು. ದಲಿತವರ್ಗಗಳ ಅನೇಕ ಭಕ್ತರುಗಳು ತಾವು ಭಕ್ತಿಯಲ್ಲಿ, ವ್ಯಕ್ತಿತ್ವದಲ್ಲಿ ಯಾರಿಗೂ ಕಡಿಮೆಯಿಲ್ಲವೆಂದು ಬದುಕಿನಲ್ಲಿ ತೋರಿಸಿಕೊಟ್ಟರು. ಇದರಿಂದ ಅವರಿಗೆ ಮಾನ್ಯತೆ ಸಿಕ್ಕಿತೇ ಹೊರತು ಅಸಮಾನತೆ ಅಳಿಯಲಿಲ್ಲ.

ಶಿಕ್ಷಣದ ಪ್ರಗತಿ, ಕೈಗಾರಿಕೀಕರಣದ ಕಾರಣದಿಂದ ಇಂದು ನಗರಗಳಲ್ಲಿ, ಅಸ್ಪೃಶ್ಯತೆ ಕಾಣೆಯಾಗಿದ್ದರೂ ಹಳ್ಳಿಗಳಲ್ಲಿ ಇನ್ನೂ ಜೀವಂತವಾಗಿದೆ. ನಗರದಲ್ಲಿ ಆತ್ಮೀಯ ಮಿತ್ರರಾಗಿದ್ದವರು ಹಳ್ಳಿಯಲ್ಲಿ ಜಾತಿಯ ಕಾರಣಕ್ಕಾಗಿ ದೂರವನ್ನು ಕಾಯ್ದುಕೊಳ್ಳುವ ಪ್ರಸಂಗಗಳು ಬರುತ್ತವೆ. ಈ ಶತಮಾನದಲ್ಲಿ ಅಂಬೇಡ್ಕರ್ ಮತ್ತು ಗಾಂಧೀಜಿಯವರ ಪ್ರಯತ್ನಗಳು ಈ ಸಮಸ್ಯೆಗಳನ್ನು ಅಳಿಸಿ ಹಾಕುವಲ್ಲಿ ನೆರವಾಗಿವೆ. ಅಸ್ಪೃಶ್ಯರಿಗೆ ಹರಿಜನರೆಂದು ನಾಮಕರಣ ಮಾಡಿದ ಮಹಾತ್ಮ ಗಾಂಧಿಯವರು ದಲಿತರ ಏಳಿಗೆಗಾಗಿ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಂಡರು. ಅನೇಕ ಸಂಪ್ರದಾಯ ಶರಣರ ಕಣ್ಣು ತೆರೆಸಿದರು. ಜಾತಿ ಮತ್ತು ವರ್ಣಾಶ್ರಮ ಪದ್ಧಂತ ಘೋರ ವಾದ ಅಸ್ಪೃಶ್ಯತೆ ಅಳಿಯಲೇಬೇಕೆಂಬುದು ಗಾಂಧಿಯರ ಆಶಯವಾಗಿತ್ತು. ಗಾಂಧೀಜಿಯವರ ಪ್ರೇರಣೆಯಿಂದ ಅನೇಕ ಜನ ಸಮಾಜ ಸೇವಕರು ದಲಿತರ ಸೇವೆಗೆ ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದ ಗಾಂಧೀಜಿ ಅಸ್ಪೃಶ್ಯರು ಹಿಂದೂ ಸಮಾಜದ ಒಂದು ಅವಿಭಾಜ್ಯ ಅಂಗ ಎಂಬ ನಿಲುವನ್ನು ಹೊಂದಿದ್ದರು.

ಅಂಬೇಡ್ಕರ್ರವರ ನಿಲುವು ಈ ವಿಷಯದಲ್ಲಿ ಗಾಂಧೀಜಿಯವರಿಗಿಂತ ಉಗ್ರವಾದದ್ದಾಗಿತ್ತು. ಸ್ವತಃ ಅಸ್ಪೃಶ್ಯತೆಯ ನೋವುಂಡ ಅಂಬೇಡ್ಕರ್ ರವರ ಮನಸ್ಸು ಕಹಿಯಾಗಿತ್ತು. ಅಸ್ಪೃಶ್ಯತೆಯನ್ನು ನಿವಾರಿಸಿ ದಲಿತರ ಅಭಿವೃದ್ಧಿಯನ್ನು ಸಾಧಿಸಲು ಅಂಬೇಡ್ಕರ್ರವರು ಅವಿರತವಾಗಿ ಶ್ರಮಿಸಿದರು. ತೀವ್ರವಾದ ಸಂಕಟದಿಂದ ಅವರು ತಮ್ಮ ಜೀವಿತದ ಕೊನೆಯ ಭಾಗದಲ್ಲಿ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧ ಧರ್ಮವನ್ನು ಸ್ವೀಕರಿಸಿದರು. ಇಷ್ಟಾದರೂ ಹಳ್ಳಿಗಾಡಿನಲ್ಲಿ ಈ ಸಮಸ್ಯೆ ಪರಿಹಾರವಾಗದೇ ಉಳಿದಿದೆ. ಏಕಪಕ್ಷೀಯವಾಗಿ ಅಸ್ಪೃಶ್ಯತೆಯ ಸಮಸ್ಯೆ ಪರಿಹಾರವಾಗಲು ಸಾಧ್ಯವೇ ಇಲ್ಲ. ಸವರ್ಣೀಯ ಹಿಂದೂಗಳು ಮತ್ತು ಅಸ್ಪೃಶ್ಯರು ಒಟ್ಟಾಗಿಯೇ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಈ ಸಾಮಾಜಿಕ ಪಿಡುಗಿನ ನಿವಾರಣೆಗೆ ಎಲ್ಲರೂ ಕಂಕಣಬದ್ಧರಾಗಬೇಕಾಗಿದೆ. ಮೇಲು ವರ್ಗಗಳು ಮನಸ್ಸು ಮತ್ತು ಹೃದಯಗಳನ್ನು ಬದಲಾಯಿಸಿಕೊಂಡು ದಲಿತರ ಬಗೆಗೆ ಮಾನವೀಯ ದೃಷ್ಟಿಯನ್ನು ತಳೆದಾಗ ಮಾತ್ರ ಈ ಸಮಸ್ಯೆ ಪರಿಹಾರವಾಗುತ್ತದೆ. ಆದ್ದರಿಂದ ಅಸ್ಪೃಶ್ಯತೆಯ ನಿವಾರಣೆಯ ಹೊಣೆಗಾರಿಕೆ ಮೇಲು ವರ್ಗದ ಯುವಕರ ಮೇಲಿದೆ. ಈ ಸಮಸ್ಯೆಯ ಬಗ್ಗೆ ಉಳಿದವರನ್ನು ಎಚ್ಚರಿಸುವ, ತಿದ್ದುವ ಕೆಲಸ ಅವರದಾಗಬೇಕು. ಗಾಂಧೀಜಿಯವರು ನಡೆಸುತ್ತಿದ್ದ 'ಹರಿಜನ' ಪತ್ರಿಕೆಯಲ್ಲಿ ಒಂದು ಸಂಗತಿ ಇದೆ. ಅಲ್ಲಿ ಗಾಂಧಿ ಬರೆಯುತ್ತಾರೆ ಸ್ನಾನ ಮಾಡಿಸಿ, ಶುಚಿಗೊಳಿಸುವ ತಾಯಿಯನ್ನು ಮಗು ಕೃತಜ್ಞತೆಯಿಂದ ನೋಡು ಇದೆ. ಹಾಗೆಯೇ ಗಾಯವನ್ನು ತೊಳೆದು ಔಷಧಿ ಹಾಕಿ ಬಟ್ಟೆ ಕಟ್ಟುವ ವೈದ್ಯನನ್ನು ರೋಗಿ ಕೃತಜ್ಞತೆಯಿಂದ ನೋಡುತ್ತಾನೆ. ಆದರೆ ಊರನ್ನು ಶುಚಿಗೊಳಿಸುವ ಪೌರಕಾರ್ಮಿಕನನ್ನು ನಾವೇಕೆ ದೂರ ಇಟ್ಟಿದ್ದೇವೆ? ಗಾಂಧಿ ಜಿಯವರು ಇಲ್ಲಿಗೆ ಐವತ್ತು ವರ್ಷಗಳ ಹಿಂದೆ ಕೇಳಿದ ಪ್ರಶ್ನೆಯನ್ನು ಇಂದು ಸಂಬಂಧಪಟ್ಟವರೆಲ್ಲರೂ ತಮಗೆ ತಾವೇ ಕೇಳಿಕೊಳ್ಳಬೇಕಾಗಿದೆ. ಈ ಪ್ರಶ್ನೆ ಯನ್ನು ಕೇಳಿಕೊಳ್ಳುವುದು ಅಸ್ಪೃಶ್ಯತಾ ನಿವಾರಣೆಗೆ ನಾಂದಿ ಆಗುತ್ತದೆ. ದಲಿತ ವರ್ಗದ ವಿದ್ಯಾವಂತರ ಮೇಲೂ ಜವಾಬ್ದಾರಿಯಿದೆ.

ಅಂಬೇಡ್ಕರ್ ಅವರ ಸಂದೇಶದಂತೆ ಶಿಕ್ಷಣ, ಸಂಘಟನೆ, ಹೋರಾಟವೇ ದಲಿತರ ವಿಮೋಚನೆಗೆ ಉಳಿದಿರುವ ದಾರಿಯೆಂದು ತಿಳಿದು ಅವರ ಕ್ರಾಂತಿಕಾರ ಕನಸನ್ನು ನಿಜವಾಗಿಸಬೇಕಾಗಿದೆ. ಮುಂದುವರೆದಿರುವ ದಲಿತರು ತಮ ಬಾಂಧವರು ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದುವರಿಯಲು ನೆರವಾಗಿ ಬೇಕು. ದಲಿತರಲ್ಲೇ ಮನೆಮಾಡಿರಬಹುದಾದ ದುಶ್ಚಟಗಳನ್ನೂ, ಕೀಳರಿ ಯನ್ನೂ ಅಳಿಸಿ ಹಾಕಿ ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಬೇಕು. ಆಗ ಮಾತ್ರ ಮಧ್ಯದಿಂದ ಊನಗೊಂಡ ನಮ್ಮ ಸಮಾಜ ಆರೋಗ್ಯಪೂರ್ಣವಾಗು ಇದೆ. ನಮ್ಮ ಬದುಕಿನ ನಡುವೆ ಮಾನವೀಯತೆ ಅರಳುತ್ತದೆ.